**ಪಾಠ 9**

## ಸಭೆ:

# ಅದರ ಗುರುತಿಸುವಿಕೆ

**ಅದರ ಶಾಶ್ವತತೆ**

1. **ಸಭೆಯ ಸತತ ಜಯದ ಬಗ್ಗೆ ಯೇಸು ಏನು ಹೇಳಿದನು (ಮತ್ತಾಯ 16:18)?**
2. **ಸಭೆಯ ಮುಖಾಂತರ ಆತನ ಸತತವಾದ ಮಹಿಮೆಯ ಬಗ್ಗೆ ಏನು (ಎಫೆಸ 3:21)?**
3. **ದೇವರ ರಾಜ್ಯದ ಸ್ಥಿರತೆಯ ಬಗ್ಗೆ ಪೌಲನು ಹೇಗೆ ಮಾತಾಡಿದನು (ಇಬ್ರಿಯ 12:28)?**
4. **ದೇವರ ರಾಜ್ಯವು ನಾಶಪಡಿಸಲ್ಪಡದೇ ಇರುವಂಥದ್ದರ ಬಗ್ಗೆ ದಾನಿಯೇಲನು ಏನು ಹೇಳಿದನು (ದಾನಿಯೇಲ 2:44)?**
5. **ಸಭೆಯ ಶಾಶ್ವತತೆ ಮತ್ತು ಸಭೆಯ ಪರಂಪರೆಯ ಮಧ್ಯದಲ್ಲಿ ಭಿನ್ನತೆ ಹೇಳಿರಿ.**
   ಸಭೆಯು ಎಂದೂ ಜನಸಂಖ್ಯೆಯಿಲ್ಲದ್ದಾಗುವುದಿಲ್ಲ ಎಂದು ಯೇಸು ವಾಗ್ದಾನ ಮಾಡಿದನು (ಮತ್ತಾಯ 16:18), ಸಮಯ ದಾಟಿ ಹೋಗುವವರೆಗೆ ಯಾವಾಗಲೂ ನಂಬಿಗಸ್ತ ಸದಸ್ಯರು ಇರುವರು; ಇದು ಸಭೆಯ ಶಾಶ್ವತತೆ ಆಗಿರುತ್ತದೆ. ಪರಂಪರೆ, "ಸ್ಥಾಪಿಸಲ್ಪಟ್ಟ ಕೆಲವು ನಿಯಮಗಳ ಪ್ರಕಾರ ವ್ಯಕ್ತಿಗಳ ಇಲ್ಲವೇ ವಸ್ತುಗಳ ಸರಣಿ ಹಿಂಬಾಲಿಸುವುದು; ಅರಸುಗಳ ಪರಂಪರೆಯಂತೆ." ಅಭಿಪ್ರಾಯವು ಹೀಗಿದೆ: ಒಂದೇ ವಿಶ್ವಾಸ ಮತ್ತು ಕ್ರಮವುಳ್ಳ ಸಭೆಗಳ ಮುರಿಯದ ಸರಣಿಯು (ಸರಪಣಿಯು), ಕ್ರಿಸ್ತನ ದಿನಗಳಿಂದ ಇಂದಿನ ಸಮಯದವರೆಗೆ ಇರುವುದು. ಇದು ಸಂಪೂರ್ಣವಾಗಿ ತಪ್ಪು ಅಭಿಪ್ರಾಯವಾಗಿದೆ.

**ಸಭೆಯು ಹೇಗೆ ಗುರಿತಿಸಲ್ಪಡಬಹುದು**

1. **ಕಟ್ಟುವಾತನಿಂದ. ಸಭೆಯನ್ನು ಯಾರು ಕಟ್ಟಿದರು (ಮತ್ತಾಯ 16:18)?**
   ಟಿಪ್ಪಣಿ: ಪಾಠ 11ರಿಂದ ಎಲ್ಲಾ ಸಭಾಪಂಗಡಗಳ ಮೂಲಗಳನ್ನು ತೋರಿಸಿರಿ. ಹೊಸ ಒಡಂಬಡಿಕೆಯ ಸಭೆಯು ಹೀಗೆ ತನ್ನ ಪ್ರಾರಂಭ ಹೊಂದಲಿಲ್ಲ ಎಂಬುದನ್ನು ತೋರಿಸಿರಿ.
2. **ಸ್ಥಾಪಿಸಲ್ಪಟ್ಟ ಸಂಖ್ಯೆಯಿಂದ. ಎಷ್ಟು ಸಭಾಪಂಗಡಗಳಿಗೆ ದೈವಿಕ ಮೂಲವಿದೆ (ಮತ್ತಾಯ 16:18)?**
   a. ಅಲ್ಲಿ ಎಷ್ಟು ದೇಹಗಳಿವೆ (ಎಫೆಸ 4:4ಎ)?
   b. ಆದರೆ ಈ "ಒಂದು ದೇಹ" ಏನಾಗಿದೆ (ಎಫೆಸ 1:22ಬಿ, 23ಎ; ಕೊಲೊಸ್ಸೆ 1:18ಎ)?
      (1) ಹೊಸ ಒಡಂಬಡಿಕೆಯ ಅನೇಕ ಸ್ಥಳಿಕ ಸಭೆಗಳು ಇದನ್ನು ಅಲ್ಲಗಳೆಯುತ್ತವೆಯೋ?
      (2) ಸಭೆಯ ದೈವಿಕ ಮೂಲ "ಇರತಕ್ಕದ್ದನ್ನು" ತೋರಿಸಿರಿ (ಕೀರ್ತನೆ 127:1ಎ; ಮತ್ತಾಯ 15:13)?
3. **ಅಸ್ತಿವಾರದಿಂದ. ಅಸ್ತಿವಾರವು ಯಾವುದಾಗಿದೆ (ಮತ್ತಾಯ 16:16-18; 1 ಕೊರಿಂಥ 3:10, 11)?**

ರಕ್ಷಿಸಲ್ಪಡಲು ಒಬ್ಬನು ಅಸ್ತಿವಾರದ ಮೇಲೆ ಇರತಕ್ಕದ್ದು ಎಂಬುದನ್ನು ತೋರಿಸಿರಿ (1 ಕೊರಿಂಥ 3:10ಬಿ, 11)?

**4. ಕಟ್ಟಡದ ಸ್ಥಳದಿಂದ. ಸಭೆಯು ಎಲ್ಲಿ ಕಟ್ಟಲ್ಪಟ್ಟಿತು (ಯೆಶಾಯ 2:2, 3; ಜೆಕರ್ಯ 1:16)?**

a. ಪ್ರಾರಂಭದ ಸ್ಥಳದ ಬಗ್ಗೆ ಯೇಸು ಏನು ಹೇಳಿದನು (ಲೂಕ 24:47, 49)?

b. ಪ್ರಾರಂಭದ ಬಗ್ಗೆ ಪೇತ್ರನು ಏನು ಹೇಳಿದನು (ಅಪೊಸ್ತಲರ ಕೃತ್ಯಗಳು 11:15)?

**5. ಬೀಗದ ಕೈಗಳನ್ನು ಉಪಯೋಗಿಸುವವನಿಂದ. ಬೀಗದ ಕೈಗಳನ್ನು ಯಾರು ಉಪಯೋಗಿಸಬೇಕಾಗಿತ್ತು (ಮತ್ತಾಯ 16:18, 19)?**

a. ಅವನು ಯಾವಾಗ ಬೀಗದ ಕೈಗಳನ್ನು ಉಪಯೋಗಿಸಿದನು (ಅಪೊಸ್ತಲರ ಕೃತ್ಯಗಳು 2:1, 37)?

b. ಯಾವ ಶರತ್ತುಗಳು ಎಲ್ಲರ ಮೇಲೆ ಹಾಕಲ್ಪಟ್ಟಿವೆ (ಅಪೊಸ್ತಲರ ಕೃತ್ಯಗಳು 2:36, 38)?

**6. ಆಚರಿಸಲ್ಪಡುವ ದಿನದಿಂದ, ಯಾವ ದಿನದಂದು ಸಭೆ ರೊಟ್ಟಿಮುರಿಯಿತು (ಅಪೊಸ್ತಲರ ಕೃತ್ಯಗಳು 20:7ಎ)?**

a. ಯಾವ ದಿನದಂದು ಕ್ರಿಸ್ತನು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು (ಲೂಕ 24:1-3, 6)?

b. ಯಾವ ದಿನದಂದು ಶಿಷ್ಯರು ಗಂಟುಮಾಡಿ ಇಟ್ಟಿಕೊಳ್ಳಬೇಕಾಗಿತ್ತು (1 ಕೊರಿಂಥ 16:2)?

c. ಯಾವ ದಿನದಂದು ಯೋಹಾನನು "ಆತ್ಮ"ನಲ್ಲಿ ಇದ್ದನು (ಪ್ರಕಟನೆ 1:10ಎ)?

d. ಯಾವ ದಿನದಂದು ಕ್ರಿಸ್ತನು ತನ್ನ ಸ್ವಂತದವರಿಗೆ ಕಾಣಿಸಿಕೊಂಡನು (ಮಾರ್ಕ 16:9; ಯೋಹಾನ 20:1ಎ, 16, 19)?

**7. ಭೋಜನದ ಪುನರಾವರ್ತನೆಯಿಂದ. ಅದು ಎಷ್ಟು ಸಲ ಆಚರಿಸಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 20:7ಎ)?**

a. ಯಾವುದರಲ್ಲಿ ಆದಿ ಸಭೆಯು ಸ್ಥಿರವಾಗಿತ್ತು (ಅಪೊಸ್ತಲರ ಕೃತ್ಯಗಳು 2:42)?

b. ಕೊರಿಂಥದವರಿಗೆ ಯಾವ ಅಪ್ಪಣೆಗಳು ಕೊಡಲ್ಪಟ್ಟವು (1 ಕೊರಿಂಥ 11:23-26)?

ಮಾಸಿಕ, ತ್ರೈಮಾಸಿಕ ಹಾಗೂ ಅರ್ಧವಾರ್ಷಿಕ ಆಚರಣೆಗಳ ಬಗ್ಗೆ ಏನು?

**8. ಸಭೆಗೆ ಅನ್ವಯಿಸಲ್ಪಟ್ಟ ಹೆಸರುಗಳಿಂದ. ಈ ಹೆಸರುಗಳಲ್ಲಿ ಒಂದನ್ನು ಕೊಡಿರಿ (1 ಕೊರಿಂಥ 1:2ಎ)?**

a. ಸಭೆಯನ್ನು ವಿವರಿಸುವ ಎರಡು ಮಾತುಗಳನ್ನು ಹೇಳಿರಿ (ಅಪೊಸ್ತಲರ ಕೃತ್ಯಗಳು 20:28ಬಿ; 1 ತಿಮೊಥೆ 3:15ಬಿ)?

b. ಮೂರು ಇತರ ಮಾತುಗಳನ್ನು ಕೊಡಿರಿ (ಕೊಲೊಸ್ಸೆ 1:18ಎ; ಇಬ್ರಿಯ 12:23ಎ; ರೋಮಾಪುರ 16:16ಬಿ)?

ಬೇರೆ ಇತರ ಹೆಸರುಗಳನ್ನು ಧರಿಸಬಾರದು ಎಂಬುದನ್ನು ತೋರಿಸಿರಿ (ಕಲೊಸ್ಸೆ 3:17; ಪ್ರಕಟನೆ 22:18, 19)?

**9. ಸದಸ್ಯರಿಗೆ ಅನ್ವಯಿಸಿದ ಹೆಸರುಗಳಿಂದ. ಸಾಮಾನ್ಯವಾದ ಹೆಸರನ್ನು ಹೇಳಿರಿ (ಅಪೊಸ್ತಲರ ಕೃತ್ಯಗಳು 5:14)?**

a. ಉಪಯೋಗಿಸಲ್ಪಟ್ಟ ಇನ್ನು ಮೂರು ಹೆಸರುಗಳನ್ನು ಹೇಳಿರಿ (ಅಪೊಸ್ತಲರ ಕೃತ್ಯಗಳು 6:7ಎ; ರೋಮಾಪುರ 8:17ಎ; 1 ಕೊರಿಂಥ 1:2ಬಿ).

b. ಉಪಯೋಗಿಸಲ್ಪಟ್ಟ ಇತರ ಮೂರು ಮಾತುಗಳನ್ನು ವಿವರಿಸಿರಿ (ಎಫೆಸ 6:6ಬಿ; ಇಬ್ರಿಯ 13:1; ಅಪೊಸ್ತಲರ ಕೃತ್ಯಗಳು 11:26).

c. ಈಗ ಸರ್ವಶ್ರೇಷ್ಠ ಹೆಸರನ್ನು ಕೊಡಿರಿ (ಅಪೊಸ್ತಲರ ಕೃತ್ಯಗಳು 11:26; ಕೊಲೊಸ್ಸೆ 1:18ಸಿ).

**10. ರಕ್ತಕ್ಕೆ ಅದರ ಸಂಬಂಧದಿಂದ. ಸಭೆಯು ಹೇಗೆ ಕೊಂಡುಕೊಳ್ಳಲ್ಪಟ್ಟಿತು (ಅಪೊಸ್ತಲರ ಕೃತ್ಯಗಳು 20:28)?**

ಯಾವುದು ಇಲ್ಲದೆ ಪ್ರಾಯಶ್ಚಿತ್ತವಿಲ್ಲ (ಇಬ್ರಿಯ 9:22)?

**11. ಅದರ ಒಂದೇ ಮಾರ್ಗದರ್ಶಿ ಪುಸ್ತಕದಿಂದ. ಈ ಮಾರ್ಗದರ್ಶಿಯು ಯಾವುದು (2 ತಿಮೊಥೆ 8:16, 17)?**

ಬೇರೆ ಇತರ ಯಾವುದೇ ಪುಸ್ತಕದಿಂದ ಆಳಲ್ಪಡುವ ಸಭೆಯ ಬಗ್ಗೆ ಏನು?

**12. ಅದರ ಮಿಶನರಿ ಉತ್ಸಾಹದಿಂದ. ಅದರ ಸುವಾರ್ತಾಕಾರ್ಯಕ್ರಮ ಯಾವುದಾಗಿರುತ್ತದೆ (ಅಪೊಸ್ತಲರ ಕೃತ್ಯಗಳು 1:8; 8:1, 4)?**

a. ಈ ನಿಯೋಗವನ್ನು ಸಭೆಯು ಹೇಗೆ ಪೂರೈಸಿತು (ಕೊಲೊಸ್ಸೆ 1:23)?

b. ಮಿಶನರಿ ವಿರೋಧಿ ಸಭೆಯು ಪರಿಶುದ್ಧ ಬರಹಕ್ಕೆ ಅನುಗುಣ ವಾಗಿರುವಂಥದ್ದಾಗಿರುವುದೋ (ಮಾರ್ಕ 16:15, 16)?

© 2009 Truth for Today